31-07-2023

## ಆದೇಶ

**1.** ಅರ್ಜಿದಾರರು ಜನನ ಮತ್ತು ಮರಣ ನೋಂದಣಿ ಕಾಯ್ದೆ ಕಲಂ 13(3) ರಡಿಯಲ್ಲಿ ಅರ್ಜಿಯನ್ನು ಸಲ್ಲಿಸಿ ತಮ್ಮ ಜನನ ದಿನಾಂಕವನ್ನು ಎದುರುದಾರರ ಕಛೇರಿಯಲ್ಲಿ ನೋಂದಾಯಿಸುವಂತೆ ಎದುರುದಾರರಿಗೆ ಸೂಕ್ತ ನಿರ್ದೇಶನ ನೀಡಬೇಕೆಂದು ಕೇಳಿಕೊಂಡಿದ್ದಾರೆ.

**2.** ಅರ್ಜಿದಾರರಾದ ಆರ್.ಭೀಮರಾಜು ರವರು ತಮ್ಮ ಅರ್ಜಿಯಲ್ಲಿ ತಾನು ದಿನಾಂಕ 20-10-1963 ರಂದು ಮನೆ ಸಂ.37, 4 ನೇ ಅಡ್ಡರಸ್ತೆ, ಗೋಪಾಲಪ್ಪ ಬಡಾವಣೆ, ಕೆಂಪಾಪುರ, ಹೆಬ್ಬಾಳ, ಬೆಂಗಳೂರಿನಲ್ಲಿ ಜನಿಸಿದ್ದು, ಕಾನೂನಿನ ಬಗ್ಗೆ ತಿಳುವಳಿಕೆ ಇರದ ಕಾರಣ ಜನನ ದಿನಾಂಕವನ್ನು ಎದುರುದಾರರ ಕಛೇರಿಗೆ ತಿಳಿಸಿಲ್ಲವೆಂದು ಪ್ರತಿಪಾದಿಸಿರುತ್ತಾರೆ. ದಾಖಲೆಗಳಿಗೋಸ್ಕರ ಜನನ ಪ್ರಮಾಣಪತ್ರದ ಅವಶ್ಯಕತೆಯಿದ್ದು ಅದನ್ನು ಪಡೆಯಲು ಎದುರುದಾರರನ್ನು ಸಂಪರ್ಕಿಸಿದಾಗ ಅವರು ಅಲಭ್ಯ ಪ್ರಮಾಣಪತ್ರವನ್ನು ನೀಡಿರುತ್ತಾರೆ ಆದಕಾರಣ ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ.

**3.** ಎದುರುದಾರರಿಗೆ ನೋಟೀಸ್ ಜಾರಿ ಮಾಡಿದ್ದರೂ ಸಹ ಅವರು ಗೈರಾಗಿರುತ್ತಾರೆ.

**4.** ಅರ್ಜಿದಾರರು ಅ.ಸಾ.1 ಎಂದು ಸಾಕ್ಷ್ಯ ನುಡಿದು ನಿ.ಪಿ.1 ರಿಂದ 3 ರಂತೆ ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ.

**5.** ವಾದವನ್ನು ಆಲಿಸಿ, ಲಭ್ಯವಿರುವ ಸಾಕ್ಷ್ಯಾಧಾರಗಳನ್ನು ಮತ್ತು ಕಡತವನ್ನು ಪರಿಶೀಲನೆ ಮಾಡಲಾಗಿ, ಈ ಕೆಳಗಿನ ಅಂಶಗಳು ಉದ್ಭವಿಸಿವೆಃ

1. ಅರ್ಜಿದಾರರು ಅರ್ಜಿಯಲ್ಲಿ ಕೋರಿರುವ ಮನವಿಗೆ ಅರ್ಹರಿರುತ್ತಾರೆಯೇ?

2. ಏನು ಆದೇಶ?

**6.** ಮೇಲ್ಕಂಡ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸುತ್ತೇನೆ.

ಅಂಶ 1 – ಸಕಾರಾತ್ಮಕವಾಗಿ

ಅಂಶ 2 – ಅಂತಿಮ ಆದೇಶದಂತೆ ಈ ಕೆಳಗಿನ

**ಕಾ ರ ಣ ಗ ಳಿ ಗಾ ಗಿ**

**7. ಅಂಶ–1:** ಅರ್ಜಿದಾರರು ತಮ್ಮ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿ ಅರ್ಜಿಯಲ್ಲಿ ಹೇಳಿರುವ ಅಂಶಗಳನ್ನು ಪುನರುಚ್ಚರಿಸುತ್ತಾ ಅಲಭ್ಯ ಪ್ರಮಾಣ ಪತ್ರವನ್ನು ನಿ.ಪಿ.1, ತನ್ನ ಶಾಲಾ ವರ್ಗಾವಣಾ ಪತ್ರದ ನೋಟರಿಕೃತ ಪ್ರತಿಯನ್ನು ನಿ.ಪಿ.2, ತನ್ನ ಆಧಾರ್ ಕಾರ್ಡಿನ ನೋಟರಿಕೃತ ಪ್ರತಿಯನ್ನು ನಿ.ಪಿ.3 ರಂತೆ ಗುರುತಿಸಿಕೊಂಡಿರುತ್ತಾರೆ.

8. ಎದುರುದಾರರು ನ್ಯಾಯಾಲಯಕ್ಕೆ ಹಾಜರಾಗಿ ಅರ್ಜಿದಾರರ ಸಾಕ್ಷ್ಯವನ್ನು ವಿರೋಧಿಸಿರುವುದಿಲ್ಲ. ಅ.ಸಾ.1 ರವರ ಸಾಕ್ಷ್ಯ, ದಾಖಲೆಗಳು ಮತ್ತು ಅರ್ಜಿಯ ಸಂಗತಿಗಳನ್ನು ಒಟ್ಟಾರೆಯಾಗಿ ಪರಿಗಣನೆಗೆ ತೆಗೆದುಕೊಂಡರೆ, ಅರ್ಜಿದಾರರು ತಮ್ಮ ಅರ್ಜಿಯಲ್ಲಿ ಕೋರಿದ ಮನವಿಯನ್ನು ಸಾಬೀತುಪಡಿಸಿರುವುದು ಕಂಡು ಬರುತ್ತದೆ. ಹೀಗಾಗಿ ಅರ್ಜಿದಾರರ ಸಾಕ್ಷ್ಯವನ್ನು ಅಲ್ಲಗಳೆಯಲು ಯಾವುದೇ ಸಾಕ್ಷ್ಯಾಧಾರಗಳು ಲಭ್ಯವಿಲ್ಲದ ಕಾರಣ ಮೇಲಿನ ಅಂಶವನ್ನು ಸಕಾರಾತ್ಮಕವಾಗಿ ಉತ್ತರಿಸಿದ್ದೇನೆ.

9. **ಅಂಶ-2:** ಮೇಲೆ ಹೇಳಿದ ಕಾರಣಗಳು ಮತ್ತು ಅಂಶಕ್ಕೆ ನೀಡಿದ ಉತ್ತರದಿಂದಾಗಿ ಈ ಕೆಳಕಂಡಂತೆ ಮಾಡುವ

**ಆದೇಶ**

ಜನನ ಮತ್ತು ಮರಣ ನೋಂದಣಿ ಕಾಯ್ದೆಯ ಕಲಂ 13(3) ಅಡಿಯಲ್ಲಿ ಅರ್ಜಿದಾರರು ಸಲ್ಲಿಸಿದ ಅರ್ಜಿಯನ್ನು ಈ ಮೂಲಕ ಪುರಸ್ಕರಿಸಲಾಗಿದೆ.

ಅಗತ್ಯವಿರುವ ಶುಲ್ಕ ಮತ್ತು ದಂಡವನ್ನು ಸಂಗ್ರಹಿಸಿದ ನಂತರ, ಸಂಬಂಧಪಟ್ಟ ರಿಜಿಸ್ಟರ್‌ನಲ್ಲಿ ಈ ಕುರಿತು ನಮೂದು ಮಾಡಲು ಎದುರುದಾರರಿಗೆ ಈ ಮೂಲಕ ನಿರ್ದೇಶಿಸಲಾಗಿದೆ.

**ಮುಖ್ಯ ಮಹಾನಗರ ದಂಡಾಧಿಕಾರಿಗಳು,**
**ಬೆಂಗಳೂರು ನಗರ.**